ವಿಳಾಸ ಎಲ್ಲದರ ಬಗ್ಗೆ ಲೋಕಾಭಿರಾಮವಾಗಿ ಕೇಳಿ ತಿಳಿದುಕೊಂಡ. ಬೀಳ್ಕೊಡುವ ಮುಂಚೆ ಕುಮಾರನು 'ಈಗಿನ ಪ್ರಪಂಚದಲ್ಲಿ ನಿನ್ನಂತಹ ಪ್ರಾಮಾಣಿಕರು ಬಹಳ ಅಪರೂಪ. ನಿನ್ನ ಗುಣ ನನಗೆ ಬಹಳ ಇಷ್ಟವಾಯಿತು. ಆದ್ದರಿಂದ ನೀನು ನಿನ್ನ ಜೀವನದ ಬಗ್ಗೆ ಹೇಳಿದರೆ ನಾನು ನಿನ್ನ ಬಗ್ಗೆ ಒಂದು ಒಳ್ಳೆಯ ಕಥೆ ಬರೆಯುತ್ತೇನೆ' ಎಂದ. 'ಅದೆಲ್ಲಾ ಏನೂ ಬೇಡ ಸರ್, ಇನ್ನೊಮ್ಮೆ ನೋಡೋಣ' ಎಂದು ಸಂಕೋಚದಿಂದ ನಾರಾಯಣ ಜಾಗ ಖಾಲಿ ಮಾಡಿದ. 'ಬೇರೆ ಯಾರಿಗಾದರೂ ನಿನ್ನ ಬಗ್ಗೆ ನಾನು ಕಥೆ ಬರೆಯುತ್ತೇನೆ ಎಂದರೆ ಖುಷಿಪಡುತ್ತಾರೆ. ಆದರೆ ಈತ ಬೇಡವೆಂದು ಓಡಿಹೋಗುತ್ತಿದ್ದಾನಲ್ಲ?' ಎಂದು ಕುಮಾರನು ಯೋಚಿಸುವಷ್ಟರಲ್ಲಿ ನಾರಾಯಣ ಅಲ್ಲಿಂದ ಕಾಲ್ಕಿತ್ತಿದ್ದ. ಆದರೂ 'ಈತನೇ ನನ್ನ ಕಥೆಯ ನಾಯಕ. ಈತನ ಬಗ್ಗೆ ಬರೆಯಲೇಬೇಕು. ಆದರೆ ಕಲ್ಪಿಸಿಕೊಂಡು ಬರೆಯುವುದಕ್ಕಿಂತ ಆತನ ಬಗ್ಗೆ ತಿಳಿದುಕೊಂಡೇ ಬರೆಯುತ್ತೇನೆ' ಎಂದು ನಿಶ್ಚಯಿಸಿದ.

ನಾರಾಯಣನನ್ನು ಮಾತನಾಡಿಸುತ್ತಿರುವಾಗ ಆತ ಯಾವುದೋ ಕಷ್ಟದಲ್ಲಿದ್ದಾನೆಂದು ಆತನ ಮುಖಭಾವದಿಂದಲೇ ವೇದ್ಯವಾಗಿತ್ತು. ಹಾಗಾಗಿ ಆತನೊಂದಿಗೆ ವಿವರವಾಗಿ ಮಾತನಾಡಿ, ಆತನ ಕಷ್ಟಗಳನ್ನು ಕೇಳಿದ ಬಳಿಕವೇ ಕಥೆ ಬರೆದರೆ ಕಥೆಯೂ ಅಥೆಂಟಿಕ್ ಆಗಿರುತ್ತದೆ ಮತ್ತು ಆತನ ಕಷ್ಟಕ್ಕೂ ಏನಾದರೂ ಪರಿಹಾರ ಸೂಚಿಸಿ, ಸಹಾಯ ಮಾಡಿದಂತಾಗುತ್ತದೆ ಎಂದುಕೊಂಡ. ಆದರೆ ಕೆಲಸಗಳ ಒತ್ತಡದ ಮಧ್ಯೆ ನಾರಾಯಣನನ್ನು ನೋಡಲು ಸಮಯವೇ ಆಗಲಿಲ್ಲ. ಆದರೂ ಕಾಲೇಜಿನಲ್ಲಿ ಪಾಠ ಮಾಡುವಾಗ ಇಲ್ಲವೇ ಪ್ರಯಾಣ ಮಾಡುವಾಗ ಅಚಾನಕ್ಕಾಗಿ ನಾರಾಯಣನ ಮುಖ ಮನಸ್ಸಿನಲ್ಲಿ ಸುಳಿಯುತ್ತಿತ್ತು. ತಕ್ಷಣ ಕುಮಾರ ಅನ್ಯಮನಸ್ಕನಾಗುತ್ತಿದ್ದ, ಕಥೆಯೊಳಗೇ ಹೋಗಿ ಬಿಡುತ್ತಿದ್ದ. ಕೆಲವೊಮ್ಮೆ ಕಾರಿನಲ್ಲಿ ಹೋಗುತ್ತಿರುವಾಗ, ಇಲ್ಲ ಮಾರುಕಟ್ಟೆಗೆ ಹೋಗಿದ್ದಾಗ, ಅಥವಾ ಹೋಟೆಲ್‌ನಲ್ಲಿ ಸ್ನೇಹಿತರೊಂದಿಗೆ ಕಾಫಿ ಕುಡಿಯುವಾಗ ಸುಮ್ಮನೆ ಹಾಗೆಯೇ ದೂರಕ್ಕೆ ಕಣ್ಣುಹಾಯಿಸಿದಾಗಲೆಲ್ಲಾ ನಾರಾಯಣ ಕಸದ ತೊಟ್ಟಿಯ ಹತ್ತಿರವೋ ಅಥವಾ ಜನಜಂಗುಳಿಯಲ್ಲಿ ಒಬ್ಬನಾಗಿಯೋ



ಕಾಣಿಸತೊಡಗಿದ. ಹಾಗೆ ಅವನು ಕಂಡ ತಕ್ಷಣ ಕುಮಾರನೊಳಗಿನ ಕಥೆಗಾರ ಚಡಪಡಿಸುತ್ತಿದ್ದ. ನಾರಾಯಣ ತನ್ನ ಪಾಡಿಗೆ ತಾನು ತಲೆಬಾಗಿಸಿಕೊಂಡು ಕಸದ ತೊಟ್ಟಿಯಿಂದ ಆಯ್ದ ವಸ್ತುಗಳನ್ನು ತನ್ನ ನೂಕು ಗಾಡಿಯಲ್ಲಿ ಹಾಕಿಕೊಂಡು ಹೋಗುತ್ತಿರುತ್ತಿದ್ದ. ಒಂದು ವಾರದಲ್ಲಿ ಬೇರೆ ಬೇರೆ ಜಾಗದಲ್ಲಿ ಪದೇ ಪದೇ ನಾರಾಯಣನು ಕಾಣಿಸಿದನೋ ಅಥವಾ ಕಾಣಿಸಿದಂತಾಯಿತೋ ಎಂಬುದು ಕುಮಾರನಿಗೆ ಬಗೆಹರಿಯಲಿಲ್ಲ. ಕೊನೆಕೊನೆಗೆ ಬರುಬರುತ್ತಾ ನಿದ್ರೆಯಲ್ಲಿ ಅಸ್ಪಷ್ಟವಾದ ಕನಸುಗಳಲ್ಲಿ ನಾರಾಯಣ ಕಂಡಂತಾಗಿ ಒಂದೆರಡು ಬಾರಿ ನಿದ್ದೆಯಿಂದ ಎದ್ದಿದ್ದ. ತಾನು ಬರೆಯುವಾಗ ಮಾತ್ರ ಪಾತ್ರಗಳನ್ನು ಮನದ ಒಳಗಡೆ ಬಿಟ್ಟುಕೊಳ್ಳಬೇಕು. ಆದರೆ, ತಾನು ಮೊದಲೇ ಹೀಗೆ ಪಾತ್ರಗಳನ್ನು ತಲೆಯ ಮೇಲೆ ಹತ್ತಿಸಿಕೊಂಡು